# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರ ಹೆಸರು** : ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 2061(2412)

**ಉತ್ತರಿಸಬೇಕಾದ ದಿನಾಂಕ** : 27.03.2026

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಸಿಂಧನೂರು ತಾಲ್ಲೂಕಿನ 32 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಾದ 'ಜಲ ಜೀವನ್ ಮಿಷನ್' ಯೋಜನೆಯಡಿಯಲ್ಲಿ ಸಮರ್ಪಕವಾಗಿ ಶುದ್ಧ ಕುಡಿಯುವ ನೀರಿನ ಸರಬರಾಜು ಆಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾಗೂ NABARD Infrastructure Development Assistance (NIDA)ನ ನೆರವಿನಿಂದ ರಾಯಚೂರು ಜಿಲ್ಲೆಯ ಎಲ್ಲಾ 1406 ಗ್ರಾಮೀಣ ಜನವಸತಿಗಳಿಗೆ ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಲಾಗಿರುತ್ತದೆ.<br>ಸದರಿ ಯೋಜನೆಯಿಂದ ಸಿಂಧನೂರು ತಾಲ್ಲೂಕಿನ 145 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಲಾಗಿರುತ್ತದೆ.<br><br>ಮೇಲಿನ DBOT ಯೋಜನೆಯಡಿಯಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಬರುವ ವಿವಿಧ ಘಟಕಗಳ ಅನುಷ್ಠಾನದ ಪ್ರಗತಿ ವಿವರ ಈ ಕೆಳಗಿನಂತಿರುತ್ತದೆ.<br><br>**1. Zonal Balancing Tank (ZBT):**<br>ಒಟ್ಟು 10 ಸಂಖ್ಯೆಗಳು<br>• 06 ZBTಗಳು ಪೂರ್ಣಗೊಂಡಿವೆ.<br>• 04 ZBTಗಳು ಪ್ರಗತಿ ಹಂತದಲ್ಲಿವೆ.<br><br>**2. Village OHTs:**<br>ಒಟ್ಟು 96 ಸಂಖ್ಯೆಗಳು<br>• 22 OHTಗಳು ಪೂರ್ಣಗೊಂಡಿವೆ<br>• 10 OHTಗಳು ಪ್ರಗತಿ ಹಂತದಲ್ಲಿವೆ<br><br>**3. Pipeline ಕಾಮಗಾರಿಗಳು:**<br>ಒಟ್ಟು ಪೈಪ್ ಲೈನ್ : 749.71 ಕಿಮೀ<br>• ಪೂರ್ಣಗೊಂಡಿರುವುದು: 618 ಕಿಮೀ<br>• ಉಳಿದಂತೆ 131.71 ಕಿ.ಮೀ ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು, ಸಿಂಧನೂರು ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ 'ಜಲ ಜೀವನ್ ಮಿಷನ್' ಯೋಜನೆಯಡಿಯಲ್ಲಿ ಒಟ್ಟು 4 ಹಂತಗಳಲ್ಲಿ 213 FHTC ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 197 ಕಾಮಗಾರಿಗಳನ್ನು ಭೌತಿಕವಾಗಿ ಪೂರ್ಣಗೊಳಿಸಲಾಗಿದ್ದು, ಇನ್ನೂ 16 ಕಾಮಗಾರಿಗಳು ಪ್ರಗತಿಯಲ್ಲಿವೆ. |

| | | |
|---|---|---|
| | | ಒಟ್ಟು 48698 ಯೋಜಿತ FHTCಗಳ ಪೈಕಿ ಪ್ರಸ್ತುತ 4[illegible]24 ಮನೆಗಳಿಗೆ FHTC ಸಂಪರ್ಕ ನೀಡಲಾಗಿದೆ, ಬಾಕಿ ಪ್ರಗತಿಯಲ್ಲಿರುವ 16 ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಿಂಧನೂರು ತಾಲ್ಲೂಕಿನ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಆ) | ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ: | DBOT ಯೋಜನೆಯ ಭೌತಿಕ ಪ್ರಗತಿಯು 72ಶೇ. ಆಗಿದ್ದು, ಗುತ್ತಿಗೆದಾರರಿಗೆ ಮಾರ್ಚ್ -2026ರ ಅಂತ್ಯದೊಳಗೆ MBR-1 ಅಡಿಯಲ್ಲಿ ಬರುವ ಲಿಂಗಸೂಗೂರು ತಾಲ್ಲೂಕಿನ 176 ಜನವಸತಿಗಳಿಗೆ, ಸಿಂಧನೂರು ತಾಲ್ಲೂಕಿನ 244 ಜನವಸತಿಗಳಿಗೆ ಮತ್ತು ಮಾನ್ವಿ ತಾಲ್ಲೂಕಿನ 32 ಜನವಸತಿಗಳಿಗೆ ಒಟ್ಟಾರೆಯಾಗಿ 452 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಗುರಿಯನ್ನು ನೀಡಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಿ ಯೋಜಿತ ಎಲ್ಲಾ ಜನವಸತಿಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ.<br>ಮುಂದುವರೆದು, 213 Invillage ಕಾಮಗಾರಿಗಳ ಪೈಕಿ 197 ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಉಳಿದ 16 ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಿಂಧನೂರು ತಾಲ್ಲೂಕಿನ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಇ) | ಯಾವ ಗುತ್ತಿಗೆದಾರರಿಂದ ಸದರಿ ಕಾಮಗಾರಿಯು ಅನುಷ್ಠಾನಗೊಂಡಿದೆ ಹಾಗೂ ಇದಕ್ಕೆ ತಗುಲಿರುವ ವೆಚ್ಚ ಎಷ್ಟು; | ಜೆ.ಜೆ.ಎಮ್ ಯೋಜನೆಯಲ್ಲಿನ DBOT MVS ಕಾಮಗಾರಿಯನ್ನು ಟೆಂಡರ್ ಮುಖಾಂತರ M/s Shankara Narayana Constructions ಇವರಿಗೆ ದಿನಾಂಕ:04.06.2022 ರಂದು ರೂ.2292.20ಕೋಟಿಗಳ ಮೊತ್ತಕ್ಕೆ 30 ತಿಂಗಳುಗಳ ಗುತ್ತಿಗೆ ಅವಧಿ ನಿಗಧಿಪಡಿಸಿ ವಹಿಸಲಾಗಿರುತ್ತದೆ ಹಾಗೂ ರೂ.1247.67ಕೋಟಿಗಳ ವೆಚ್ಚವಾಗಿರುತ್ತದೆ.<br><br>ಜೆ.ಜೆ.ಎಮ್ Invillage ಕಾಮಗಾರಿಗಳನ್ನು 119 ಗುತ್ತಿಗೆದಾರರಿಂದ ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಇದಕ್ಕೆ 7562.00 ಲಕ್ಷಗಳ ವೆಚ್ಚವಾಗಿರುತ್ತದೆ . |
| ಈ) | ಯಾವ ಕಾಲಮಿತಿಯೊಳಗೆ ಸದರಿ 32 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲಾಗುವುದು? | DBOT ಯೋಜನೆಯ ಭೌತಿಕ ಪ್ರಗತಿಯು 72ಶೇ. ಆಗಿದ್ದು, ಗುತ್ತಿಗೆದಾರರು ಜೂನ್ 2026ರರವರೆಗೆ ಕಾಲಾವಧಿ ವಿಸ್ತರಣೆಯನ್ನು ಕೋರಿದ್ದು, |

| | | |
|---|---|---|
| | | ಯೋಜನೆಯನ್ನು ಪೂರ್ಣಗೊಳಿಸಿ ಯೋಜಿತ ಎಲ್ಲಾ ಜನವಸತಿಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ. ಮುಂದುವರೆದು, 16 Invillage ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಏಪ್ರಿಲ್-2026 ರೊಳಗಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು